# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಡಾ॥ ರಾಜ್‌ಕುಮಾರ್ ವಾರ್ಡ್ ಸಂಖ್ಯೆ: 106

ಸಂ: ಸ.ಅ(ವಾ-106)/ಪಿ.ಆರ್/ /2020-21ದಿನಾಂಕ: 09/03/2021

### ವಾರ್ಡ್ ಸಮಿತಿ ಸಭೆಯ ನಡವಳಿ

ದಿನಾಂಕ: 09-03-2021ರಂದು ವಾರ್ಡ್ ಸಂಖ್ಯೆ: 106 ಡಾ॥ ರಾಜ್‌ಕುಮಾರ್ ವಾರ್ಡ್ ನಲ್ಲಿ ಶ್ರೀಮತಿ. ಗೀತಾಎಲ್. ವಾರ್ಡ್ ನಂ. 106ರ ನೋಡಲ್‌ಅಧಿಕಾರಿಯವರಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿ

ಹಾಜರಿದ್ದ ಅಧಿಕಾರಿಗಳು/ನೌಕರರು ಮತ್ತು ವಾರ್ಡ್ ನಿವಾಸಿಗಳು –

1) ಶ್ರೀಮತಿ. ಗೀತಾ. ಎಲ್, ನೋಡಲ್ ಅಧಿಕಾರಿಗಳು
2) ಶ್ರೀ. ಅರುಣ್‌ಕುಮಾರ್, ಸಹಾಯಕಅಭಿಯಂತರರು ಮತ್ತು ಕಾರ್ಯದರ್ಶಿ ವಾರ್ಡ್ ನಂ. 106
3) ಶ್ರೀ ಸಿದ್ದಗಂಗ, ಕೆಲಸ ಪರಿವೀಕ್ಷಕರು, ಬಿ.ಡಬ್ಲ್ಯೂಎಸ್.ಎಸ್‌ಬಿ
4) ಮುರಳಿ ಮೋಹನ್, ಕಂದಾಯ ವಸೂಲಿಗಾರರು
5) ಅವಿನಾಶ್‌ಎಸ್, ಆರೋಗ್ಯ ಪರಿವೀಕ್ಷಕರು
6) ಸುದೀಪ್, ವಾರ್ಡ್ ಮಾರ್ಷಲ್
7) ಆನಂದ್, ಹೆಚ್.ವಿ, ಸಹಾಯಕಅಭಿಯಂತರರು, ಬೆಸ್ಕಾಂ
8) ಎಸ್. ಆರ್‌ಚಂದ್ರಶೇಖರ್, ಕಿರಿಯಆರೋಗ್ಯ ಪರಿವೀಕ್ಷಕರು
9) ರಂಗನಾಥ್‌ಕೆ.ಆರ್, ಕಿರಿಯಆರೋಗ್ಯ ಪರಿವೀಕ್ಷಕರು
10) ಶಿವರಾಮ್, ಅರಣ್ಯ ಇಲಾಖೆ
11) ಎಂ. ಮಲ್ಲಿಕಾರ್ಜುನಯ್ಯ, ವಾರ್ಡ್ ನಿವಾಸಿ
12) ಬಿ.ವಿ.ಎಸ್ ಮೂರ್ತಿ, ವಾರ್ಡ್ ನಿವಾಸಿ
13) ಕಾಂತಿಲಾಲ್, ವಾರ್ಡ್ ನಿವಾಸಿ
14) ಚೇತನ್‌ಆರ್. ವಾರ್ಡ್ ನಿವಾಸಿ
15) ಬಾಲರಾಜು, ಕಸ ಸಂಗ್ರಹಣೆಗುತ್ತಿಗೆದಾರರು.

ಮಾನ್ಯಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು/ಹಾಜರಿದ್ದವರ ಪರಸ್ಪರರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

- ಸಭೆಯಲ್ಲಿ ಈ ಹಿಂದಿನ ಸಭೆಯಲ್ಲಿಕೈಗೊಂಡ ನಿರ್ಣಯಗಳ ಬಗ್ಗೆ ಚರ್ಚಿಸಲಾಯಿತು.
- ಬೀದಿ ದೀಪಗಳ ನಿರ್ವಹಣೆಯನ್ನು ಸರಿಯಾಗಿ ನಿರ್ವಹಿಸುವಂತೆ ಮಾನ್ಯಅಧ್ಯಕ್ಷರು ಸಂಭಂದಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.
- ಬಸವೇಶ್ವರ ನಗರ 1ನೇ ಮುಖ್ಯರಸ್ತೆಯಲ್ಲಿ ಬಸ್ ಶೆಲ್ಟರ್ ನಿರ್ಮಿಸಿಕೊಡುವಂತೆ ಅಲ್ಲಿನ ನಿವಾಸಿಗಳು ತಿಳಿಸಿದ್ದು ಮಾನ್ಯಅಧ್ಯಕ್ಷರುಟಿ.ಇ.ಸಿ ಯವರಿಗೆಅರ್ಜಿ ಬರೆಯುವಂತೆ ಸೂಚಿಸಿದರು.

- ಬಸವೇಶ್ವರ ನಗರ 1ನೇ ಮುಖ್ಯರಸ್ತೆಯ ಫುಟ್‌ಪಾತ್‌ಗಳ ಮೇಲೆ ಟ್ರಾನ್ಸ್‌ಫಾರ್ಮರ್ ಮತ್ತುಕಂಟ್ರೋಲ್ ಪ್ಯಾನಲ್ ಗಳನ್ನು ಕೂರಿಸಿದ್ದು, ಕೂಡಲೇ ತೆರವುಗೊಳಿಸುವಂತೆ ಅಲ್ಲಿನ ನಿವಾಸಿಗಳು ತಿಳಿಸಿದ್ದು, ಕೂಡಲೇಕ್ರಮ ಕೈಗೊಳ್ಳುವಂತೆ ಮಾನ್ಯಅಧ್ಯಕ್ಷರು ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು
- <u>ಸ್ವಚ್ಛತೆ ಮತ್ತುಘನತ್ಯಾಜ್ಯ ವಿಲೇವಾರಿ ಬಗ್ಗೆ</u>-ಮಾನ್ಯಅಧ್ಯಕ್ಷರು ಹಿರಿಯ/ಕಿರಿಯಆರೋಗ್ಯ ಪರಿವೀಕ್ಷಕರುಗಳಿಗೆ ಕಸ ಸಂಗ್ರಹಣೆಯಲ್ಲಿಯಾವುದೇ ದೂರುಗಳು ಬಾರದಂತೆಕ್ರಮವಹಿಸಲು ಸೂಚಿಸಿದರು.
- ಬಸವೇಶ್ವರ ನಗರ ಪೋಲಿಸ್ ಠಾಣೆಯ ಹಿಂಭಾಗದರಸ್ತೆಯಲ್ಲಿಚರಂಡಿ ಸ್ಲಾಬ್‌ಗಳು ಮುರಿದಿದ್ದು, ಕೂಡಲೇ ಸರಿಪಡಿಸುವಂತೆ ಮಾನ್ಯಅದ್ಯಕ್ಷರು ಸೂಚಿಸಿದರು.
- ಅಂಡರ್ ಪಾಸ್‌ಗಳಲ್ಲಿ ಬೆಳೆದಿರುವ ಗಿಡಗಳನ್ನು ಶೀಘ್ರವಾಗಿ ತೆರವುಗೊಳಿಸಬೇಕೆಂದು ಮಾನ್ಯಅಧ್ಯಕ್ಷರು ಸೂಚಿಸಿದರು.
- ವಾರ್ಡ್‌ನಲ್ಲಿ ಮರಗಳ ಮೇಲೆ ಭಿತ್ತಿ ಪತ್ರಗಳನ್ನು ಅಂಟಿಸಿ ಜಾಹಿರಾತು ಮಾಡುತ್ತಿದ್ದು, ಅಂತವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮಾನ್ಯಅಧ್ಯಕ್ಷರು ಸೂಚಿಸಿದರು.
- ವಾರ್ಡ್‌ನ ವ್ಯಾಪ್ತಿಯಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಮಾನ್ಯಅಧ್ಯಕ್ಷರು ಸೂಚಿಸಿದರು.
- ಕಂದಾಯ ವಸೂಲಾತಿಯನ್ನು ಸಮರ್ಪಕವಾಗಿಮಾಡಬೇಕೆಂದುಮಾನ್ಯಅಧ್ಯಕ್ಷರು ಸೂಚಿಸಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರಕುಂದು ಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲುಕ್ರಮ ತೆಗೆದುಕೊಳ್ಳಲು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದಕಾರ್ಯನಿರ್ವಹಿಸುಲು ಸೂಚಿಸಿ ಮುಂದಿನ ಸಭೆಗೆಎಲ್ಲಾಅಧಿಕಾರಿ ಸಿಬ್ಬಂದಿಗಳು ಹಾಜರಿರಲು ತಿಳಿಸಿ ಸಭೆಯನ್ನು ಮುಕ್ತಾಯ ಮಾಡಿದರು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕಅಭಿಯಂತರರು
ವಾರ್ಡ್ ನಂ. 106 ಡಾ॥ ರಾಜ್‌ಕುಮಾರ್ ವಾರ್ಡ್
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಸಮಿತಿಅದ್ಯಕ್ಷರು
ಹಾಗೂ ವಾರ್ಡ್ ನೋಡಲ್‌ಅಧಿಕಾರಿ
ವಾರ್ಡ್ ನಂ. 106 ಡಾ॥ ರಾಜ್‌ಕುಮಾರ್ ವಾರ್ಡ್
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು-**

1) ಮಾನ್ಯಆಯುಕ್ತರುರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸದೆ.
2) ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸದೆ.
3) ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸದೆ.
4) ಜಂಟಿಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸದೆ.
5) ಮುಖ್ಯಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸದೆ.
6) ಅಧೀಕ್ಷಕಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸದೆ.
7) ಕಾರ್ಯಪಾಲಕಅಭಿಯಂತರರು (ಗೋವಿಂದರಾಜನಗರ) ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸದೆ.
8) ಸಹಾಯಕಕಾರ್ಯಪಾಲಕಅಭಿಯಂತರರು, ಬೆಸ್ಕಾಂ ರವರ ಮಾಹಿತಿಗಾಗಿ ಕಳುಹಿಸಿದೆ.
9) ಸಹಾಯಕಕಾರ್ಯಪಾಲಕಅಭಿಯಂತರರು, ಬಿ.ಡಬ್ಲ್ಯೂಎಸ್.ಎಸ್.ಬಿ ರವರ ಮಾಹಿತಿಗಾಗಿ ಕಳುಹಿಸಿದೆ